**ದಿನಾಂಕಃ 12.11.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

**6.** ಸಾಕ್ಷಿಗೆ ಒಂದು ಚೆಕ್ಕಿನ ಪೋಟೋ ಪ್ರತಿಯನ್ನು ತೋರಿಸಲಾಗಿ ಆ ಚೆಕ್ಕಿನಲ್ಲಿರುವ ಕ್ರಮ ಸಂಖ್ಯೆ ಹಾಗೂ ನಿ.ಪಿ.1 ರಲ್ಲಿನ ಕ್ರಮ ಸಂಖ್ಯೆಗಳು ಅನುಕ್ರಮವಾಗಿ ಇರುತ್ತವೆ ಎಂದರೆ ಸರಿ ಎಂದು ಒಪ್ಪಿಕೊಂಡಿರುವ ಮೇರೆಗೆ ಸದರಿ ದಾಖಲೆಯನ್ನು **ನಿ.ಡಿ.1** ಎಂದು, ಅದರಲ್ಲಿನ ಚೆಕ್ಕಿನ ಕ್ರಮ ಸಂಖ್ಯೆಯನ್ನು **ನಿ.ಡಿ.1(ಎ)** ಎಂದು ಗುರುತಿಸಲಾಯಿತು. ಆರೋಪಿಯ ಪ್ರಕಾರ ನಿ.ಡಿ.1 ಮತ್ತು ನಿ.ಪಿ.1 ಅನ್ನು ಆರೋಪಿಯು ಅವರ ಮನೆಯ ಮಾಲೀಕರಿಗೆ ನೀಡಿದ್ದರು ಎಂದರೆ ಸಾಕ್ಷಿಯು ನಿ.ಪಿ.1 ವಿವಾದಿತ ಚೆಕ್ಕನ್ನು ನನಗೆ ನೀಡಿದ್ದರು ನಿ.ಡಿ.1 ಅನ್ನು ಯಾರಿಗೆ ನೀಡಿದ್ದರು ಎಂದು ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ.

**7.** ಆರೋಪಿ ಪಿಜಿಯನ್ನು ನಡೆಸುತ್ತಿದ್ದರು ಎಂದು ಸಾಕ್ಷ್ಯ ನುಡಿದಿದ್ದು, ಅದು ಮಹಿಳೆಯರ ಪಿಜಿಯಾಗಿತ್ತೋ ಅಥವಾ ಪುರುಷರ ಪಿಜಿಯಾಗಿತ್ತೋ ಎಂದರೆ ಅದು ನನಗೆ ಗೊತ್ತಿಲ್ಲ. ಆರೋಪಿಯು ಅಪರ್ಣ ಬಾಯ್ಸ್ ಪಿಜಿಯು ನಂ.23, 2 ನೇ ಮುಖ್ಯರಸ್ತೆ, ಅತ್ತಿಗುಪ್ಪೆ, ಬೆಂಗಳೂರು ಎಂಬ ವಿಳಾಸದಲ್ಲಿ ಇರುತ್ತದೆ ಎಂದು ಸಾಕ್ಷಿಗೆ ಒಂದು ಜೆರಾಕ್ಸ್ ಪ್ರತಿಯನ್ನು ವಿಳಾಸಕ್ಕಾಗಿ ಮಾತ್ರ ತೋರಿಸಲಾಗಿ ವಿಳಾಸದ ಭಾಗವನ್ನು ಒಪ್ಪಿಕೊಂಡ ಮೇರೆಗೆ ಒಪ್ಪಿತ ಭಾಗವನ್ನು ಮಾತ್ರ **ನಿ.ಡಿ.2** ಎಂದು ಗುರುತಿಸಲಾಯಿತು. ಸಾಕ್ಷಿಗೆ ಮತ್ತೊಂದು ಜೆರಾಕ್ಸ್ ಪ್ರತಿಯನ್ನು ವಿಳಾಸಕ್ಕಾಗಿ ಮಾತ್ರ ತೋರಿಸಲಾಗಿ ವಿಳಾಸದ ಭಾಗವನ್ನು ಒಪ್ಪಿಕೊಂಡ ಮೇರೆಗೆ ಒಪ್ಪಿತ ಭಾಗವನ್ನು ಮಾತ್ರ **ನಿ.ಡಿ.3** ಎಂದು ಗುರುತಿಸಲಾಯಿತು. ನೀವು ನಿ.ಡಿ.2 ರಲ್ಲಿರುವ

ವಿಳಾಸಕ್ಕೆ ನೋಟೀಸು ನೀಡಿರುತ್ತರೋ ಅಥವಾ ನಿ.ಡಿ.3 ರಲ್ಲಿರುವ ವಿಳಾಸಕ್ಕೆ ನೋಟೀಸು ನೀಡಿರುತ್ತಿರೋ ಎಂದರೆ ಆರೋಪಿ ಲಕ್ಕಣ್ಣರವರ ಬಿಲ್ಡಿಂಗ್ ಗೆ ಸರಕುಗಳನ್ನು ಸರಬರಾಜು ಮಾಡಿ ಎಯಿ ತಿಳಿಸಿದ್ದರು ಆ ಕಾರಣ ಲಕ್ಕಣ್ಣ ರವರ ಬಿಲ್ಡಿಂಗ್ ವಿಳಾಸಕ್ಕೆ ನೋಟೀಸು ನೀಡಿದ್ದೇನೆ ಎಂದು ನುಡಿಯುತ್ತಾರೆ. ಈ ವಿಷಯವನ್ನು ನೋಟೀಸು ಹಾಗೂ ಪಿರ್ಯಾದಿನಲ್ಲಿ ತಿಳಿಸಿದ್ದೀರಾ ಎಂದರೆ ತಿಳಿಸಿರುವುದಿಲ್ಲ, ಸಾಕ್ಷಿ ಮುಂದುವರೆದು ನಾನು ದಾಖಲೆಗಳನ್ನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ.

**8.** ನೋಟೀಸು ನೀಡಲು ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ನೋಟೀಸಿನಲ್ಲಿ ಆರೋಪಿಯು ಅಕ್ಟೋಬರ್ 2019 ನೇ ಇಸವಿಯಲ್ಲಿ ಪರಿಚಯವಾದರು ಎಂದರೆ ಸರಿ. ಅದಾದ ನಂತರ ಮೂರು ತಿಂಗಳವರೆಗೂ ಸಾಲದ ಮೇಲೆ ಸರಕುಗಳನ್ನು ಸರಬರಾಜು ಮಾಡಿರುತ್ತೇನೆ ಎಂದರೆ ಸರಿ. ಆ ನಂತರ ಹಣ ನೀಡುವಂತೆ ನೀವು ಕೋರಿಕೊಂಡಾಗ ಚೆಕ್ಕು ನೀಡಿರುತ್ತಾರೆ ಎಂದು ನಮೂದಿಸಿದ್ದೀರಿ ಎಂದರೆ ಸರಿ. ನಿ.ಪಿ.2 ಕ್ಕೆ ಬ್ಯಾಂಕಿನ ಮೊಹರು ಹಾಗೂ ಸಹಿ ಇರುವುದಿಲ್ಲ ಎಂದರೆ ಸಾಕ್ಷಿಯು ದಾಖಲೆಯನ್ನು ಪರಿಶೀಲಿಸಿ ಅದರಲ್ಲಿ ಬ್ಯಾಂಕಿನ ಹೆಸರನ್ನು ನಮೂದಿಸಿರುತ್ತಾರೆ ಎಂದು ನುಡಿಯುತ್ತಾರೆ. ನಿ.ಪಿ.2 ರಲ್ಲಿ ಬ್ಯಾಂಕಿನ ಮೊಹರು ಹಾಗೂ ಸಹಿ ಇದೆಯೇ ಎಂದರೆ ಸಾಕ್ಷಿಯು ಅದು ಬ್ಯಾಂಕಿನವರು ನೀಡಿದ ದಾಖಲೆಯಾಗಿರುತ್ತದೆ ಅದೇ ಮೂಲ ದಾಖಲೆ ಎಂದು ನುಡಿಯುತ್ತಾರೆ. ನಿ.ಪಿ.2 ಅನ್ನು ಕರ್ನಾಟಕ ಬ್ಯಾಂಕಿನವರು ನೀಡಿರುತ್ತಾರೆ. ನಿ.ಪಿ.2 ರಲ್ಲಿ ಕರ್ನಾಟಕ ಬ್ಯಾಂಕಿನ ಹೆಸರಾಗಲೀ ಮೊಹರಾಗಲೀ ಇದೆಯೇ ಎಂದರೆ ಬ್ಯಾಂಕಿನವರು ನೀಡಿದ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ.

**ಪಿಡಬ್ಲೂ.1: ಶಿವರಾಜ ಎನ್.ಎನ್**

**9.** ನಿ.ಡಿ.1 ಮತ್ತು ನಿ.ಪಿ.1 ರ ಚೆಕ್ಕುಗಳನ್ನು ಆರೋಪಿಯು ಅವರ ಮಾಲೀಕರಾದ ಮುರಳಿಕೃಷ್ಣರವರಿಗೆ ನೀಡಿದ್ದು ಮುರಳಿಕೃಷ್ಣ ರವರು ಆರೋಪಿಯ ವಿರುದ್ದ ಸಿಸಿ ನಂ.6074/2019 ರೀತ್ಯ ಪ್ರಕರಣ ದಾಖಲಿಸಿದ್ದು ಸದರಿ ಪ್ರಕರಣದಲ್ಲಿ ಆರೋಪಿ ಖುಲಾಸೆಗೊಂಡ ಕಾರಣ ಮುರಳಿಕೃಷ್ಣರವರು ಅದರ ದ್ವೇಷಕ್ಕಾಗಿ ಉಳಿದ ಚೆಕ್ಕುಗಳನ್ನು ದುರುಪಯೋಗಪಡಿಸಿಕೊಂಡು ನಿಮ್ಮ ಮೂಲಕ ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ, ಆರೋಪಿ ಚೆಕ್ಕನ್ನು ನನಗೆ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಮುರಳಿಕೃಷ್ಣರವರಿಗೂ ಆರೋಪಿಗೂ ವೈಮನಸ್ಸು ಇದ್ದ ವಿಷಯ ನಿಮಗೆ ತಿಳಿದಿತ್ತೆ ಎಂದರೆ ಆ ವಿಷಯ ನನಗೆ ತಿಳಿದಿರುವುದಿಲ್ಲ ಎಂದು ನುಡಿಯುತ್ತಾರೆ.

**10.** ನಿ.ಪಿ.6 ರಲ್ಲಿ ಸಂಪೂರ್ಣ ವಾಟ್ಸಪ್ ನ conversation ಇರುವುದಿಲ್ಲ ಎಂದರೆ ನನ್ನಲ್ಲಿ ಲಭ್ಯವಿದ್ದ ದಾಖಲೆಗಳನ್ನು ನಾನು ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. 65(ಬಿ) ಪ್ರಮಾಣ ಪತ್ರವನ್ನು ನೀವು ಕಾನೂನು ರೀತ್ಯ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು, ಮುಂದೂಡಲಾಯಿತು.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**( ಶ್ರೀಮತಿ. ನಿರ್ಮಲ ಎಂ.ಸಿ)**
ಎಸಿಜೆಎಂ ನ್ಯಾಯಾಧೀಶರು
ಲಘು ವ್ಯವಹಾರಗಳ ನ್ಯಾಯಾಲಯ
ಬೆಂಗಳೂರು.